MYSORE LEGISLATIVE ASSEMBLY

NINTH DAY

Thursday 20th October 1955.

The House met in the Crawford Hall, Mysore, at Twelve of the Clock.

MR. SPEAKER (SRI H. S. RUDRAPPA, B.SC., LL.B.) in the Chair.

QUESTIONS AND ANSWERS.

Bandur-Valagerehally tank (restoration).

Q.—246 Sri V. VENKATAPPA (Channapatna).—

Will the Government be pleased to state:—

(*a*) which was the tank restored recently near Bandur-Valagerehalli of Virupakshapura Hobli, Channapatna Taluk;

(*b*) the cost of the restoration;

(*c*) the total extent of atchkat under the restored tank;

(*d*) whether it is true that the tank bed has been now given away by the Government to some school?

A.—Sri Kadidal MANJAPPA (Minister for Revenue and Public Works).—

(*a*) Bandur-Valagerehally tank, Registered No. 189.

(*b*) Rs. 15,300.

(*c*) 40 acres 30 guntas.

(*d*) It is the encroached Government waste land above the full tank level that has been allotted to the School.

ಶ್ರೀ ವಿ. ವೆಂಕಟಪ್ಪ—ಈ ವಳಗೆರೆಹಳ್ಳಿ ಗ್ರಾಮದ ಸರ್ವೆನಂಬರೇನು?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆ ನಂಬರು ನನ್ನ ಹತ್ತಿರ ಇಲ್ಲ.

ಶ್ರೀ ವಿ. ವೆಂಕಟಪ್ಪ.—ಆ ಸಾಗುವಳಿಗೆ ಕೊಟ್ಟಿರುವ ಜಮೀನಿನ ಸರ್ವೆ ನಂಬರೇನಾದರೂ ತಮ್ಮಲ್ಲಿರುತ್ತದೆಯೇ?

ಶ್ರೀ ಕಡಿದಾಳ್ ಮಂಜಪ್ಪ.—ಫುಲ್‌ಟ್ಯಾಂಕ್ ಲೆವಲ್ಲಿನ ಮೇಲಿರತಕ್ಕ ಭಾಗವನ್ನು ಸಾಗುವಳಿಗೆ ಕೊಟ್ಟಿದ್ದಾರೆಂದು ತಿಳಿದು ಬಂದಿದೆ.

ಶ್ರೀ ವಿ. ವೆಂಕಟಪ್ಪ.—ಹಿಂದೆ ಈ ಜಮೀನನ್ನು ಜಿ.ಎಂ.ಎಫ್. ಸ್ಕೀಮಿನಲ್ಲಿ ಸಾಗುವಳಿಗೆ ಕೊಟ್ಟಿದ್ದನ್ನು ಬಿಡಿಸಿ, ಹಾಗೆ ಸಾಗುವಳಿಗೆ ಕೊಟ್ಟರೆ ಆ ಮಣ್ಣೆಲ್ಲಾ ಕೆರೆಯ ಅಂಗಳದೊಳಕ್ಕೆ ಬರುತ್ತದೆಂದು ಸಾಗುವಳಿಗೆ ಆ ಕೊಟ್ಟಿದ್ದ ಜಮೀನುಗಳನ್ನೆಲ್ಲಾ ಬಿಡಿಸಿ ಬಿಡಲಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ಆ ವಿಚಾರ ಗೊತ್ತಿಲ್ಲ.

ಶ್ರೀ ವಿ. ವೆಂಕಟಪ್ಪ.—ಹೀಗೆ ಒಳಗೆರೆಯಲ್ಲಿರತಕ್ಕಂಥ ಭಾಗವನ್ನು ವ್ಯವಸಾಯಕ್ಕೆ ಕೊಟ್ಟರೆ ಕೆರೆಗೆ ತೊಂದರೆಯಾಗುತ್ತದೆಂದು ತಾವು ಅಲ್ಲಿಗೆ ಬಂದಿದ್ದಾಗ ಅಭಿಪ್ರಾಯ ಪಟ್ಟಿರಲಿಲ್ಲವೇ?

ಶ್ರೀ ಕಡಿದಾಳ್ ಮಂಜಪ್ಪ.—ಆ ವಿಚಾರ ನನಗೆ ನೆನಪಿಲ್ಲ.

ಶ್ರೀ ವಿ. ವೆಂಕಟಪ್ಪ.—ಆ ಸ್ಕೂಲು ಈ ಜಮೀನಿಗೆ ಎಷ್ಟು ದೂರದಲ್ಲಿದೆ?

ಶ್ರೀ ಕಡಿದಾಳ್ ಮಂಜಪ್ಪ.—ಆದರೆ ಒಂದು ವಿಷಯವನ್ನು ನಾನೀಗ ಹೇಳಬೇಕಾಗಿದೆ. ಈ ಪೈಕಿ 11½ ಎಕರೆ ಜಮೀನು ಫುಲ್‌ಟ್ಯಾಂಕ್ ಲೆವಲ್ ಮೇಲಿದೆ. ಇಂಥದನ್ನು ಮಾತ್ರ ಕೆಲವರು ಅಕ್ರಮವಾಗಿ ಸಾಗುವಳಿ ಮಾಡುತ್ತಿದ್ದರು. ಆದರೆ ಈಗ ಆ ಜಮೀನನ್ನು ಸ್ಕೂಲಿಗೆ ಕೊಡಲು ಆರ್ಡರಾಗಿದೆ.

Bridge across Kaganur Halla in Kenchammana-Hosakote Hobli (construction)

Q.—423. Sri G. A. THIMMAPPAGOWDA (Arkalgud).—

Will the Government be pleased to state:—

(*a*) whether plan and estimates for the construction of a bridge or causeway across Kaganur Halla in Kenchammana-Hoskote Hobli are prepared;

(*b*) whether they intend to accord sanction to this work this year?

A.—Sri Kadidal MANJAPPA (Minister for Revenue and Public Works).—

(*a*) Yes, for a bridge.

(*b*) The work has been included in the programme for Malnad communications or the current year and sanction to it is under consideration.